5

# ಯೇಸುವಿನ ಹಿಂದಿರುವಿಕೆ

ಯೇಸುವು ತಂದೆಯ ಬಳಿಗೆ ಏರಿಹೋದ ಸಮಯದಿಂದ, ಕ್ರೈಸ್ತರು ಆತನು ಹಿಂದಿರುಗಿ ಬರುವದಕ್ಕಾಗಿ ಕಾದುಕೊಂಡಿದ್ದಾರೆ. ಈ ಘಟನೆಯ ಅಗಾಧತೆಯನ್ನೂ ಇದರಬಗ್ಗೆ ಕೊಡಲ್ಪಟ್ಟಿರುವ ಮಾಹಿತಿಯ ಅಲ್ಪತೆಯನ್ನೂ ಯೋಚಿಸುವಾಗ, ಬಹುಶಃ ಯೇಸುವಿನ ಎರಡನೆಯ ಬರೋಣದ ಬಗ್ಗೆ ಅನೇಕ ವಿಚಾರಗಳು ಅಸ್ತಿತ್ವದಲ್ಲಿರುವುದು ಆಶ್ಚರ್ಯಕರವಾದದ್ದಾಗಿರುವದಿಲ್ಲ. ಈ ಪಾಠದಲ್ಲಿ ಮತ್ತು ಮುಂದಿನ ಪಾಠದಲ್ಲಿ ಆತನ ಹಿಂದಿರುಗಿ ಬರುವಿಕೆಯನ್ನು ಕುರಿತು ಬೈಬಲು ಏನು ಬೋಧಿಸುತ್ತದೆ ಎಂಬುದನ್ನು ಕಲಿತುಕೊಳ್ಳೋಣ ಮತ್ತು ಬೋಧಿಸಲ್ಪಟ್ಟ ಇತರ ದೃಷ್ಟಿಕೋನಗಳನ್ನು ಪರೀಕ್ಷಿಸೋಣ.

## ಆತನು ಹಿಂದಿರುಗಿ ಬರುವಿಕೆಯ ವಾಸ್ತವಿಕತೆ

"ಎರಡನೆಯ ಬರೋಣ" ಮತ್ತು "ಎರಡನೆಯ ಆಗಮನ" ಎಂಬ ಮಾತುಗಳು ಪರಿಶುದ್ಧಬರಹಗಳಲ್ಲಿ ಕಂಡುಬರದಿದ್ದರೂ, ಈ ಘಟನೆಯು "ಪುನಃ ಬರುವೆನು" ಎಂಬ ಹೇಳಿಕೆಗಳಿಂದ (ಯೋಹಾನ 14:3) ಮತ್ತು "ಎರಡನೆಯ ಆಗಮನ" (ಇಬ್ರಿಯ 9:28) ಎಂಬ ಹೇಳಿಕೆಯಿಂದಲೂ ಸೂಚಿಸಲ್ಪಟ್ಟಿದೆ. ಯೇಸುವಿನ ಎರಡನೆಯ ಬರೋಣವನ್ನು ಸೂಚಿಸಲು ವಿವಿಧ ಗ್ರೀಕ ಶಬ್ದಗಳು ಉಪಯೋಗಿಸಲ್ಪಟ್ಟಿವೆ:

*Apokalupsis*, ಎಂಬುದು ಯೇಸುವಿನ ಹಿಂದಿರುಗುವಿಕೆಯನ್ನು ಸಂಬಂಧಿಸಿ ಕೆಲವು ಸಲ ಉಪಯೋಗಿಸಲ್ಪಟ್ಟಿದ್ದು, "ಬರಲಿರುವನು" ಎಂದು (1 ಕೊರಿಂಥ 1:7; KJV), "ಪ್ರತ್ಯಕ್ಷನಾಗುವನು," ಮತ್ತು "ಪ್ರತ್ಯಕ್ಷತೆ" (2 ಥೆಸಲೊನೀಕ 1:7; 1 ಪೇತ್ರ 1:13; 4:13) ಮತ್ತು "ಕಾಣಿಸಿಕೊಳ್ಳಲಿರುವನು" (1 ಪೇತ್ರ 1:7; KJV) ಎಂದು ಭಾಷಾಂತರಿಸಲ್ಪಟ್ಟಿದೆ, ಭೂಲೋಕದಲ್ಲಿ ಇದ್ದಾಗ, ಯೇಸುವು ಭೂಲೋಕದ ದೇಹಗದಲ್ಲಿ ನೋಡಲ್ಪಟ್ಟನು, ಆದರೆ ಆತನ ಪರಿಪೂರ್ಣ, ದೈವಿಕ ಸ್ವಭಾವವು ಪ್ರಕಟಿಸಲ್ಪಡಲಿಲ್ಲ. ಹೀಗಿದ್ದರೂ ಆತನು ಪುನಃ ಬರುವಾಗ, ಆತನ ದೈವಿಕ ಮಹಿಮೆಯು ಪ್ರಕಟಿಸಲ್ಪಡುವುದು (ಗ್ರೀಕ: *phaneroo*, ಅರ್ಥ "ತಿಳಿಯುವಂತೆ ಮಾಡಲ್ಪಡುವುದು"; ಕೊಲೊಸ್ಸೆ 3:4).

*Epiphania* ಎಂಬುದು "ಬರುವನು" ಇಲ್ಲವೇ "ಕಾಣಿಸಿಕೊಳ್ಳುವನು" ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ ಮತ್ತು ಯೇಸುವಿನ ಎರಡನೆಯ ಬರೋಣಕ್ಕೆ ಮಾತ್ರ ಸಂಬಂಧಿಸಿದೆ (2 ಥೆಸಲೊನೀಕ 2:8ಬಿ; 1 ತಿಮೊಥೆ 6:14; 2 ತಿಮೊಥೆ 1:10; 4:1, 8; ತೀತ 2:13).

*Parousia* ಎಂಬ ಪದವು ಯೇಸುವಿನ ಹಿಂದಿರುಗುವಿಕೆಯ ಬಗ್ಗೆ ಬಹಳ ಹೆಚ್ಚು ಸಲ ಉಪಯೋಗಿಸಲ್ಪಟ್ಟಿರುತ್ತವೆ (1 ಕೊರಿಂಥ 15:23; 1 ಥೆಸಲೊನೀಕ 2:19; 3:13; 4:15; 5:23; 2 ಥೆಸಲೊನೀಕ 2:1, 8ಎ; ಯಾಕೋಬ 5:7, 8; 2 ಪೇತ್ರ 1:16; 3:4, 12; 1 ಯೋಹಾನ 2:28).

ಈ ವ್ಯಕ್ತಪಡಿಸುವಿಕೆಗಳು ಮತ್ತು ಪರಿಶುದ್ಧ ಬರಹಗಳಲ್ಲಿ ಅವುಗಳ ಅನೇಕ ಬರುವಿಕೆಗಳು ಯೇಸುವು ಹಿಂದಿರುಗಿ ಬರುವನು ಎಂಬುದಕ್ಕೆ ವಿಫುಲವಾದ ಭರವಸೆಯನ್ನು ಕೊಡುತ್ತವೆ. ಇವುಗಳೊಂದಿಗೆ "ದಿನ," "ಕರ್ತನ ದಿನ," ಮತ್ತು "ಕ್ರಿಸ್ತನ ದಿನ" ಎಂಬ ಹೇಳಿಕೆಗಳು ಆತನು ಹಿಂದಿರುಗಿ ಬರುವಾಗಿನ ಸಮಯದಲ್ಲಿಯ ಕಾಲವನ್ನು ಸೂಚಿಸುತ್ತವೆ.[1] ಈ ಮಾತುಗಳ ಹಿನ್ನೆಲೆಗಳು ಮಾತ್ರವೇ ಅವು ಎರಡನೆಯ ಬರೋಣಕ್ಕೆ ಸಂಬಂಧಿಸಿದಾಗ ನಿರ್ಧರಿಸಲ್ಪಡುವವು.

## ಆತನು ಹಿಂದಿರುಗುವಿಕೆಯ ಸಮಯ

ಯೇಸುವು ಹೊರಟುಹೋದ ನಂತರದಿಂದ, ಸುಳ್ಳು ಪ್ರವಾದಿಗಳಿಂದ ಆತನ ಹಿಂದಿರುಗುವಿಕೆಗಾಗಿ ದಿನಾಂಕಗಳು ಹೇಳಲ್ಪಡುತ್ತಲೇ ಇರುತ್ತವೆ (ಓದಿರಿ ಧರ್ಮೋಪ ದೇಶಕಾಂಡ 18:20-22). ಹೆಚ್ಚು ಚೆನ್ನಾಗಿ ತಿಳಿದ ಕೆಲವು ದಿನಾಂಕಗಳು ಈ ಕೆಳಗಿನಂತಿರುತ್ತವೆ:

| | |
|---|---|
| ವಿಲಿಯಮ್ ಮಿಲ್ಲರ್ | ಅಕ್ಟೋಬರ್ 22, 1843 |
| ಚಾರ್ಲ್ಸ್ ಟೇಜ್ ರಸ್ಸೆಲ್ | ಅಕ್ಟೋಬರ್ 1914 |
| ಜಡ್ಜ್ ಜೆ. ಎಫ್. ರುದರ್‌ಫೋರ್ಡ | 1928 |
| ಹೆರ್ಬರ್ಟ್ ಡಬ್ಲ್ಯೂ. ಆರ್ಮಸ್ಟ್ರಾಂಗ್ | 1972 |
| ಯೆಹೋವ ಸಾಕ್ಷಿಗಳು | ಶರತ್ಕಾಲ 1975 |
| ಹಾಲ್ ಲಿಂಡ್ಸೆ[2] | 1995 |

"ಇದಲ್ಲದೆ ಆ ದಿನದ ವಿಷಯವೂ ಆ ಗಳಿಗೆಯ ವಿಷಯವೂ ನನ್ನ ತಂದೆಯೊಬ್ಬನಿಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು, ಮಗನಿಗೂ ತಿಳಿಯದು" (ಮತ್ತಾಯ 24:36) ಎಂಬ ಯೇಸುವಿನ ಹೇಳಿಕೆ ಯಿದ್ದರೂ ಈ ದಿನಾಂಕಗಳು ಮುಂತಿಳಿಸಲ್ಪಟ್ಟವು, ಆತನ ಹಿಂದಿರುಗುವಿಕೆಯು ಕಳ್ಳನು ಬರುವಂತಿರುವುದು (ಮತ್ತಾಯ 24:42-44; 1 ಥೆಸಲೊನೀಕ 5:2; 2 ಪೇತ್ರ 3:10), ಅದರಲ್ಲಿ ಅದು ಅನಿರೀಕ್ಷಿತವಾದದ್ದಾಗಿರುವುದು ಮತ್ತು ಎಚ್ಚರಿಕೆ ಕೊಡಲ್ಪಡದೇ ಇರುವಂಥದ್ದಾಗಿರುವುದು. "ತಂದೆಯು ಸ್ವಂತ ಅಧಿಕಾರದಲ್ಲಿಟ್ಟು ಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳಿಕೊಳ್ಳುವದು ನಿಮ್ಮ ಕೆಲಸವಲ್ಲ" (ಅಪೊಸ್ತಲರ ಕೃತ್ಯ 1:7) ಎಂದು ಯೇಸು ಅಪೊಸ್ತಲರಿಗೆ ಹೇಳಿದನು.

ಹೊಸ ಒಡಂಬಡಿಕೆಯಲ್ಲಿ ಯಾವುದೇ ದಿನಾಂಕವು ಕೊಡಲ್ಪಡದಿದ್ದರೂ, ಯೇಸುವು ಹಿಂದಿರುಗುವ ಮೊದಲು ಕೆಲವು ಸಂಗತಿಗಳು ಸಂಭವಿಸುವವೆಂದು ಅದು ಮುಂತಿಳಿಸಿರುವುದು:

(1) ಆತನು ಹೊರಟು ಹೋದದ್ದರ ಮತ್ತು ಆತನ ಹಿಂದಿರುಗುವಿಕೆಯ ಮಧ್ಯದಲ್ಲಿ ಬಹಳ ಸಮಯವು ಕಳೆಯುವುದು (ಮತ್ತಾಯ 25:19; ಅಪೊಸ್ತಲರ ಕೃತ್ಯ 3:20, 21).

(2) ಯೆಹೂದ್ಯರು ಮತ್ತು ಅನ್ಯರು ಒಂದೇ ಹಿಂಡು ಆಗುವರು (ಯೋಹಾನ 10:16).

(3) ಯೆರೂಸಲೇಮ ಪತನಗೊಳ್ಳುವುದು (ಮತ್ತಾಯ 24:1, 2; ಮಾರ್ಕ 13:1, 2; ಲೂಕ 21:20-24).

(4) ಮತಭ್ರಷ್ಟತೆಯು ಉಂಟಾಗುವುದು, ಮತ್ತು "ಅಧರ್ಮ ಸ್ವರೂಪನು" ಪ್ರಕಟಿಸಲ್ಪಡುವನು (2 ಥೆಸಲೊನೀಕ 2:1-3).

(5) "ಅನಂತರದ ಸಮಯಗಳಲ್ಲಿ" ಜನರು ವಿಶ್ವಾಸವನ್ನು ಬಿಟ್ಟು ಹೋಗುವರು ಮತ್ತು ದುಷ್ಟತನದಲ್ಲಿ ಬೆಳೆಯುವರು (1 ತಿಮೊಥೆ 4:1, 2; 2 ತಿಮೊಥೆ 3:1-5).

(6) ಆತನ ಹಿಂದಿರುಗಿ ಬರೋಣವನ್ನು ಪ್ರಶ್ನಿಸಲು ಜನರಿಗೆ ಕಾರಣಸಿಗುವಷ್ಟು ಸಮಯ ಕಳೆದು ಹೋಗುವುದು (2 ಪೇತ್ರ 3:3-9).

(7) ಪ್ರಕಟನೆಯಲ್ಲಿ ವಿವರಿಸಲ್ಪಟ್ಟ ಘಟನೆಗಳು ಆತನ ಬರೋಣಕ್ಕಿಂತ ಮೊದಲು ನೆರವೇರುವವು.

ಯೇಸುವು ಹಿಂದಿರುಗುವದಕ್ಕಿಂತ ಮೊದಲು ಸಂಭವಿಸಬೇಕಾದ ಪ್ರತಿಯೊಂದೂ ಸಂಭವಿಸಿದೆಯೆಂದು ಇಲ್ಲಿಯವರೆಗೆ ನಾವು ನೋಡಿದ್ದೇವೆ.

## ಆತನ ಹಿಂದಿರುಗುವಿಕೆಯ ಸ್ವರೂಪ

ಯೇಸುವು ಹೇಗೆ ಹಿಂದಿರುಗಿ ಬರುವನು ಎಂಬುದರ ಬಗ್ಗೆ ಅನೇಕ ಕುತೂಹಲ ಭರಿತ ವಿವರಣೆಗಳನ್ನು ಹೊಸ ಒಡಂಬಡಿಕೆಯು ಕೊಡುತ್ತದೆ. ನಾವು ಜೀವಿಸಿರುವಾಗಲೇ ಆತನು ಬಂದರೆ, ...

*ನಾವು ಯೇಸುವನ್ನು ನೋಡುವೆವು!* (1 ಥೆಸಲೊನೀಕ 4:16; ಪ್ರಕಟನೆ 1:7).

*ನಾವು ಆತನ ಪರಿಶುದ್ಧ ದೂತರನ್ನು ನೋಡುವೆವು!* (ಮಾರ್ಕ 8:38).

*ತುತೂರಿಯ ಧ್ವನಿಯನ್ನೂ ಪ್ರಧಾನದೂತನ ಘೋಷಣೆಯನ್ನೂ ಕೇಳಿಸಿಕೊಳ್ಳುವೆವು!* (ಯೋಹಾನ 5:28; 1 ಕೊರಿಂಥ 15:52; 1 ಥೆಸಲೊನೀಕ 4:16).

ಆತನು ಮೇಘಗಳಲ್ಲಿ[3], ಉರಿಯುವ ಬೆಂಕಿಯಲ್ಲಿ, ಬಲ ಮತ್ತು ಮಹಿಮೆಯೊಂದಿಗೆ ಹಿಂದಿರುಗಿ ಬರುವದನ್ನು ನೋಡುವೆವು (ಪ್ರಕಟನೆ 1:7; 2 ಥೆಸಲೊನೀಕ 1:7; ಲೂಕ 21:27).

ತೀರಿಹೋದ ಪರಿಶುದ್ಧರು (ಯೂದ 14) ಯೇಸುವು ಹಿಂದಿರುಗಿ ಬರುವಾಗ ಆತನೊಂದಿಗೆ ಬರುವರು ಎಂದು ಕೆಲವರು ಬೋಧಿಸಿದ್ದಾರೆ. "ಪರಿಶುದ್ಧ" ಇಲ್ಲವೇ "ಪರಿಶುದ್ಧರು" ಎಂಬುದು ಗ್ರೀಕ ವಿಶೇಷಣ *hagios* ಎಂಬುದರ ಭಾಷಾಂತರ, ಇದು, "ದೇವ ಭಕ್ತರು" (ಪರಿಶುದ್ಧರು) ಎಂದೂ ಭಾಷಾಂತರಿಸಲ್ಪಟ್ಟಿದೆ. "ಯೇಸುವು ತನ್ನ *hagios* ರೊಂದಿಗೆ ಬರುವನೋ?" ಎಂಬುದು ಪ್ರಶ್ನೆಯಲ್ಲ - ಯಾಕಂದರೆ ಆತನು ಬಂದೇ ಬರುತ್ತಾನೆ. *Hagios* ಎಂಬುದು ಆತನ "ಪರಿಶುದ್ಧ" ಜನರಿಗೆ ಸಂಬಂಧಿಸಿದೆಯೋ ಇಲ್ಲವೇ ಆತನ "ಪರಿಶುದ್ಧ ದೂತರಿಗೆ" ಸಂಬಂಧಿಸಿದೆಯೋ? ಎಂಬುದು ಪ್ರಶ್ನೆಯಾಗಿದೆ. ಪ್ರತಿಯೊಂದು ಸಲ ಆತನೊಂದಿಗೆ ಹಿಂದಿರುಗಿ ಬರುವ ಜೀವಿಗಳ ಹೆಸರು ಹೇಳಲ್ಪಟ್ಟಿರುವಾಗ, ಅವರು "ದೇವದೂತರು" (ಮತ್ತಾಯ 13:39-49; 16:27) ಇಲ್ಲವೇ "ಬಲವುಳ್ಳ ದೂತರು" (2 ಥೆಸಲೊನೀಕ 1:7) ಅಥವಾ "ಪರಿಶುದ್ಧ ದೂತರು" (ಮಾರ್ಕ 8:38) ಎಂದು ಕರೆಯಲ್ಪಟ್ಟಿದ್ದಾರೆ. "ಪರಿಶುದ್ಧರು" ಇಲ್ಲವೇ "ದೇವ ಭಕ್ತರು" ಆತನೊಂದಿಗೆ ಬರುವವರು ದೇವದೂತರಾಗಿರಬೇಕು, ಹಾಗೂ ತೀರಿಹೋದವರು, ಸತ್ತುಹೋದ ನೀತಿವಂತರು ಆಗಿರುವದಿಲ್ಲ. ಇವರು ಆತನೊಂದಿಗೆ ಬರುವದಿಲ್ಲ, ಆದರೆ ಆತನು ಹಿಂದಿರುಗಿ ಬರುವಾಗ ಆತನನ್ನು ಸಂದರ್ಶಿಸಲು ಸತ್ತವರೊಳಗಿಂದ ಎಬ್ಬಿಸಲ್ಪಡುವರು.

## ಆತನ ಹಿಂದಿರುಗಿ

## ಬರುವಿಕೆಯ ಘಟನೆಗಳು

ಯೇಸುವು ಹಿಂದಿರುಗಿ ಬರುವಾಗ, ತೀವ್ರಗತಿಯಲ್ಲಿ ಘಟನೆಗಳು ಸಂಭವಿಸುವವು. ಪರಿಶುದ್ಧ ಬರಹಗಳಲ್ಲಿ ಈ ಕೆಳಗಿನ ಯಾದಿಯೂ ಕೊಡಲ್ಪಟ್ಟಿದೆ: ಭೂಮಿಯ ಮೇಲೆ ಯೇಸುವು ದುಷ್ಟತನವನ್ನೂ ಅಪನಂಬಿಗಸ್ಥಿಕೆಯನ್ನೂ ಕಂಡುಕೊಳ್ಳುವನು (ಲೂಕ 17:26-30; 18:8). ಯೇಸುವಿನ ಧ್ವನಿಯನ್ನು ಸತ್ತವರೆಲ್ಲರೂ ಕೇಳಿ ಜೀವಿಸುವರು (ಯೋಹಾನ 5:28, 29; 1 ಥೆಸಲೊನೀಕ 4:16). ಇದು ಕೊನೆಯ ವೈರಿ ಯಾದ, ಮರಣದ ಅಂತ್ಯವಾಗಿರುವುದು (1 ಕೊರಿಂಥ 15:26, 55; ಪ್ರಕಟನೆ 20:14). ಜೀವಿಸುತ್ತಿರುವ ಎಲ್ಲರೂ ಒಂದು ಕ್ಷಣದಲ್ಲಿ ರೆಪ್ಪಬಡಿಯುವುದರೊಳಗಾಗಿ ಬದಲಾಗುವರು (1 ಕೊರಿಂಥ 15:51). ಜೀವಿಸುತ್ತಿರುವವರೂ ಮತ್ತು ಸತ್ತವರೊಳಗಿಂದ ಎಬ್ಬಿಸಲ್ಪಟ್ಟವರೂ ಆಕಾಶದಲ್ಲಿ ಯೇಸುವನ್ನು ಎದುರ್ಗೊಳ್ಳುವರು (1 ಥೆಸಲೊನೀಕ 4:17). ಮೊದಲನೆಯ ಆಕಾಶವೂ ಭೂಮಿಯೂ ನಾಶಪಡಿಸಲ್ಪಡುವವು (2 ಪೇತ್ರ 3:10-12; ಮತ್ತಾಯ 24:35; ಪ್ರಕಟನೆ 20:11). ಸೈತಾನನ ಕಾರ್ಯವು ಅಂತ್ಯಗೊ ಳ್ಳುವುದು, ಮತ್ತು ಅವನ ಯಾತನೆಯು ಪ್ರಾರಂಭವಾಗುವುದು (ಮತ್ತಾಯ 25:41; ಪ್ರಕಟನೆ 20:10). ಯೇಸುವು ತನ್ನ ಸಿಂಹಾಸನದ ಮೇಲೆ ಕುಳಿತು ಕೊಳ್ಳುವನು ಮತ್ತು ಎಲ್ಲರೂ ನ್ಯಾಯ ತೀರ್ಪು ಹೊಂದಲು ಆತನ ಮುಂದೆ ಕಂಡುಕೊಳ್ಳುವರು (ಮತ್ತಾಯ 25:31, 32; ಯೋಹಾನ 5:22; 2 ಕೊರಿಂಥ 5:10; 2 ತಿಮೊಥೆ 4:1; ಪ್ರಕಟನೆ 20:11). ಈಗಿನ ಕ್ರಮವು ಅಂತ್ಯಗೊಳ್ಳುವುದು, ಮತ್ತು ಎಲ್ಲಾ ಸಂಗತಿಗಳ ಪುನರುಜ್ಜೀವನವು ಸಂಭವಿಸುವುದು (1 ಕೊರಿಂಥ 15:24; ಅಪೊಸ್ತಲರ ಕೃತ್ಯ 3:21; ಎಫೆಸ 1:10). ನ್ಯಾಯ ತೀರ್ವಿಕೆಯ ಸಮಯವು ಪ್ರಾರಂಭವಾಗಿದೆ (ಪ್ರಕಟನೆ 20:11-15) ಮತ್ತು "ರಕ್ಷಣೆಯ ದಿನವು" (2 ಕೊರಿಂಥ 6:1, 2) ದಾಟಿ ಹೋಗುವುದು. ಯೇಸುವು ಭೂಲೋಕದ ಅಧಿಕಾರಿಗಳನ್ನು ತೆಗೆದು ಹಾಕುವನು ಮತ್ತು ರಾಜ್ಯವನ್ನು ತಂದೆಗೆ ಹಿಂದಿರುಗಿಸುವನು (1 ಕೊರಿಂಥ 15:24).

ಇಂದಿನ ಸಮಯದಲ್ಲಿ, ಯೇಸುವು ಪರಲೋಕ, ಭೂಲೋಕದ ಮೇಲೆಲ್ಲಾ ಆಳ್ವಿಕೆ ಮಾಡುವನು (ಮತ್ತಾಯ 28:18; 1 ಕೊರಿಂಥ 15:27). ಆತನು ಹಿಂದಿರುಗಿ ಬರು ವಾಗ, ವಿಶ್ವದ ಮೇಲಿನ ಏಕೈಕ ಆಳ್ವಿಕೆಯು ಮುಕ್ತಾಯವಾಗುವದು. ಆತನು ಮತ್ತು ತಂದೆಯು ಸೃಷ್ಟಿಗಿಂತ ಮೊದಲು ಇದ್ದ ಅದೇ ಸಂಬಂಧದಲ್ಲಿ ಒಂದಾಗಿ ಆಳುವರು (ಯೋಹಾನ 17:5; 1 ಕೊರಿಂಥ 15:28).

ಆತನ ಬರೋಣದ ಸುತ್ತ ಇರುವ ಈ ಮಹಾ ಘಟನೆಗಳಿಗಾಗಿ ನಾವೆಲ್ಲರೂ ಸಿದ್ಧತೆ ಮಾಡಿಕೊಳ್ಳುತ್ತಿರಬೇಕು ನಮಗಾಗಿ ಒಂದು ಸ್ಥಳವನ್ನು ಸಿದ್ಧಪಡಿಸಲು ಹೊರಟು ಹೋಗುವ ಯೇಸುವಿನ ವಾಗ್ದಾನವು ನಿಶ್ಚಯವಾಗಿ ಸತ್ಯವಾದಂತೆ ಹಿಂದಿರುಗಿ ಬರುವ ಆತನ ವಾಗ್ದಾನವೂ ಸತ್ಯವಾಗುವುದು (ಯೋಹಾನ 14:3). ನಾವು ಆತನ ಬರೋಣ ಕ್ಕಾಗಿ ನೋಡುತ್ತಿರುವವರಾಗಬೇಕು (2 ಪೇತ್ರ 3:12), ಕುತೂಹಲದಿಂದ ಅದಕ್ಕಾಗಿ ಕಾದುಕೊಂಡಿರಬೇಕು (1 ಕೊರಿಂಥ 1:7; 1 ಥೆಸಲೊನೀಕ 1:10; ಯಾಕೋಬ 5:7). ಅದು ಸಂಭವಿಸುವವರೆಗೆ ಸಹಿಸಿಕೊಳ್ಳುತ್ತಿರಬೇಕು (ಮತ್ತಾಯ 25:1-13), ಮತ್ತು ಅದಕ್ಕಾಗಿ ಸಿದ್ಧರಾಗಲು ಅಗತ್ಯವಾದದ್ದನ್ನು ಮಾಡುತ್ತಿರಬೇಕು (ಮತ್ತಾಯ 24:44). ಆತನ ಕಾಣಿಸಿಕೊಳ್ಳುವಿಕೆಯನ್ನು ಪ್ರೀತಿಸುವವರು (2 ತಿಮೊಥೆ 4:8) ಆತನು ಬರುವಾಗ ಆನಂದ ಪಡುವರು (1 ಪೇತ್ರ 4:13). ಆದರೆ ಆತನಿಗೆ ವಿಧೇಯರಾಗದೇ ಹೋದವರು

ಭಯದಿಂದ ತುಂಬಲ್ಪಡುವರು ಮತ್ತು ಗೋಳಾಡುವರು (ಇಬ್ರಿಯ 10:31; ಪ್ರಕಟನೆ 1:7).

## ಮುಕ್ತಾಯ

ಯೇಸುವಿನ ಎರಡನೆಯ ಬರೋಣವು ಮಾನವ ಚರಿತ್ರೆಯಲ್ಲಿ ಅಂತಿಮ ಘಟ್ಟದ ಘಟನೆಯಾಗಿದೆ. ಯೇಸುವಿನ ಹಿಂದಿರುಗಿ ಬರುವಿಕೆಯ ಸಮಯ ಮತ್ತು ಸ್ವರೂಪದ ಬಗ್ಗೆ ಅನೇಕ ತಪ್ಪಾದ ನಿರ್ಣಯಗಳು ಮಾಡಿದ್ದರಿಂದ, ಆ ಮಹಾ ದಿನದ ಮತ್ತು ಅದಕ್ಕಾಗಿ ಹೇಗೆ ಸಿದ್ಧರಾಗಬೇಕು ಎಂಬುದರ ಬಗ್ಗೆ ಬೈಬಲ್ ಹೇಳುವದನ್ನು ಇತರರಿಗೆ ಬೋಧಿಸಲು ಸಿದ್ಧರಾಗೋಣವೋ! ಎಲ್ಲಕ್ಕಿಂತ ಹೆಚ್ಚಾಗಿ, ಆತನ ಬರೋಣಕ್ಕಾಗಿ ನಾವು ಸಿದ್ಧರಾಗಿರಬೇಕು, ನಾವು ಸಿದ್ಧರಾಗಿದ್ದರೆ, ಸಿದ್ಧರಾಗಲು ಪ್ರತಿಯೊಂದು ಪ್ರಯತ್ನವು ಬೆಲೆಯುಳ್ಳದ್ದಾಗಿರುವುದು. ನಾವು ಸಿದ್ಧರಾಗಿರದಿದ್ದರೆ, ಭೂಲೋಕದ ಪ್ರತಿಯೊಂದು ಸಾಧನೆಯು, ಯಶಸ್ಸು ಮತ್ತು ಗೌರವವನ್ನು ನಾವು ಅನುಭವಿಸಿದ್ದು ಅತಿದೊಡ್ಡ ಸೋಲುಗಳಾಗಿ ನಮಗೆ ಕಂಡುಬರುವುದು.

---

ಟಿಪ್ಪಣಿಗಳು

[1]ನೋಡಿರಿ ಮತ್ತಾಯ 7:22; 1 ಕೊರಿಂಥ 1:8; 5:5; 2 ಕೊರಿಂಥ 1:14; ಫಿಲಿಪ್ಪಿ 1:6, 10; 2:16; 1 ಥೆಸಲೊನೀಕ 5:2; 2 ಥೆಸಲೊನೀಕ 2:2; 2 ತಿಮೊಥೆ 1:18; 4:8; 2 ಪೇತ್ರ 3:10.
[2]ಮಿಲ್ಲರ್ ಅವರು ಬ್ಯಾಪ್ಟಿಸ್ಟ್ ಪ್ರಸಂಗಿ ಮತ್ತು ಯೇಸುವು 1844ರಲ್ಲಿ ಹಿಂದಿರುಗಿ ಬರುವನೆಂದು ನಂಬಿದ್ದ ಧಾರ್ಮಿಕ ಗುಂಪಿನ ನಾಯಕನಾಗಿದ್ದನು. ಈ ಗುಂಪನ್ನು ಬಿಟ್ಟುಹೋದ ಕೆಲವರು ಈಗ ಸೆವಂತ್ ಡೇ ಎಡ್ವೆಂಟಿಸ್ಟ್ ಚರ್ಚ್ ಎಂದಿರುವ ಗುಂಪನ್ನು ರಚಿಸಿದರು. ರಸ್ಸೆಲ್ಲರು ಯೆಹೋವನ ಸಾಕ್ಷಿಗಳು ಎಂದು ಈಗ ಇರುವ ಚಳವಳದ ಸಂಘಟನಕಾರರೂ ಅದರ ಪ್ರಥಮ ಅಧ್ಯಕ್ಷರೂ ಆಗಿರುವರು. "ಯೆಹೋವನ ಸಾಕ್ಷಿಗಳು" ಎಂಬ ಹೊಸ ಹೆಸರಿನೊಂದಿಗಿನ ಸಂಸ್ಥೆಯ ಎರಡನೆಯ ಪ್ರೆಸಿಡೆಂಟರು ರುದರ್‌ಫೋರ್ಡ ಆಗಿದ್ದರು. ಆರ್ಮ್‌ಸ್ಟ್ರಾಂಗ್ ಅವರು ರೇಡಿಯೋ ಚರ್ಚ್ ಆಫ್ ಗಾಡ್ ಎಂದು ತಿಳಿಯಲ್ಪಟ್ಟಿರುವ ಗುಂಪಿನ ಸ್ಥಾಪಕರೂ ನಾಯಕರೂ ಆಗಿದ್ದರು. ಲಿಂಡ್ ಅವರು *The Late Great Planet Earth* ಗ್ರಂಥ ಕರ್ತರಾಗಿರುವರು.
[3]ಯಾವ ರೀತಿಯಲ್ಲಿ ಆತನು ಹೋದನೋ ಅದೇ ರೀತಿಯಲ್ಲಿ ಹಿಂದಿರುಗಿ ಬರುವನು (ಅಪೊಸ್ತಲರ ಕೃತ್ಯ 1:11).

© 2009 Truth for Today